ಆರ್. ಮಧುಸೂದನ್, ಹಾಸನ

ಅಗ್ನಿಯಲ್ಲಿ ಹುಟ್ಟಿದ ದ್ರೌಪದಿಗೆ ವಸ್ತ್ರಾಪಹರಣದ ಅಗ್ನಿಪರೀಕ್ಷೆ ಬರಬಾರದಿತ್ತಲ್ಲವೆ?



ಬರದಿದ್ದರೆ ಎಲಾಸ್ಟಿಕ್ ಸೀರೆಯೇ ಇರುತ್ತಿರಲಿಲ್ಲವಲ್ಲ! ಪವಾಡಕ್ಕೊಂದು ಪ್ರಮಾದದ ಹಿನ್ನೆಲೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ವಯಸ್ಸಿಗೂ, ಮನಸ್ಸಿಗೂ ಏನು ವ್ಯತ್ಯಾಸ ಸರ್?

ಎರಡೂ ಬಹಳ ಪ್ರಿಯವೇ; ಒಂದು ಚಿಕ್ಕದಿರುವಾಗ, ಇನ್ನೊಂದು ದೊಡ್ಡದಿರುವಾಗ.

ಜೆ.ಬಿ.ಹಳ್ಳಿ ಚಿದಾನಂದ. ಹಿರಿಯೂರು

ಇಲ್ಲೊಬ್ಬ ಭ್ರಷ್ಟರನ್ನು ಬೇಟೆ ಆಡುತ್ತೇನೆಂದು ಹೊರಟಿದ್ದಾನಲ್ಲಾ...?

ಟೈಪಿಂಗ್ ಎರರ್; ಬೇಟೆ ಆಡು ಅಲ್ಲ, ಭೇಟಿ ಆಗು ಅಂತೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಹೆಂಗಳೆಯರಿಗೆ ಅತಿ ಪ್ರಿಯವಾದ ಸಂಗತಿ ಯಾವುದು?



ಬ್ಯಾಂಡ್‌ಗಳು ಹೇರ್‌ಬ್ಯಾಂಡ್, ವೇಯ್ಸ್ಟ್‌ಬ್ಯಾಂಡ್, ಮ್ಯೂಸಿಕ್ ಬ್ಯಾಂಡ್, ಹಸ್‌ಬ್ಯಾಂಡ್.....

ಪಿ.ಎನ್. ಶ್ರೀವತ್ಸ, ಬೆಂಗಳೂರು

ಹೆಣ್ಣಿನ ಚಿನ್ನದ ಆಸೆ ತಡೆಗಟ್ಟಲು ಸುಲಭವಾದ ಮಾರ್ಗ ಯಾವುದಾದರೂ ಇದೆಯೆ?

ಇದೆ. ಡೈಮಂಡ್, ಪ್ಲಾಟಿನಂನ ಹುಚ್ಚು ಹಿಡಿಸುವುದು!

ಜಿ.ಸ.ನಾ. ಹೊಸಪೇಟೆ

ರಾಜಪ್ರಭುತ್ವ, ಆಂಗ್ಲಪ್ರಭುತ್ವ, ಪ್ರಜಾಪ್ರಭುತ್ವ ಆದವು. ಈಗ ಕೋಟ್ಯಧಿಪತಿಗಳ ಪ್ರಭುತ್ವ. ಮುಂದೆ?

ಕೊರೋನಾ ಪ್ರಭುತ್ವ, ಲಸಿಕೆ ಪ್ರಭುತ್ವ, ಉದ್ವೇಗಪ್ರಭುತ್ವ, ಉನ್ಮಾದಪ್ರಭುತ್ವ....

ರಾಜಶೇಖರ ಹಾದಿಮನಿ, ಧಾರವಾಡ

ವಿಧಿಯ ಮುಂದೆ ಎಲ್ಲರೂ ತೃಣಸಮಾನ ಎನ್ನುತ್ತಾರೆ. ನೀವು ಎಂದಾದರೂ ವಿಧಿಯನ್ನು ಕಂಡಿದ್ದೀರಾ?

ಕಾಣುವ ಆತುರವೂ ಇಲ್ಲ. ವಿಧಿಗೇ ವಶಳಾದಾಗ ಕಂಡರಾಯಿತು.

ವಿ. ಹಮೀದ್, ವಿಟ್ಲ

ಅರ್ಧಾಂಗಿ ಸದಾ ಉತ್ತಮನಾಗಿರು ಅಂತಾಳಲ್ಲಾ, ಏಕೆ?

ಸಂಬೋಧನ ಪ್ರಥಮಾ, ಉತ್ತಮಪುರುಷದಲ್ಲಿ ಕರೆಸಿಕೊಳ್ಳುವುದನ್ನು ತಪ್ಪಿಸಿಕೊಳ್ಳಲು.

ರಮ್ಯಾ, ಬೆಂಗಳೂರು

ವಾಗ್ವಾದದಲ್ಲಿ ಯಾಕೆ ಯಾವಾಗಲೂ ಹೆಂಡತಿಯೇ ಗೆಲ್ಲುವಳು?

ಸಿಂಹಿಣಿ, ಕುಂಭಿನಿ, ವ್ಯಾಘ್ರಿ, ನಾಗಿಣಿಗಳಿಗೆ ಗಂಡು ಶರಣಾಗುವುದು ಪ್ರಾಣಿನಿಯಮ.

ಕಣ್ಣೂರು ಗೋವಿಂದಾಚಾರಿ, ಮೈಸೂರು

ಕೆಲವು ದೇವತೆಗಳು ಕ್ರೂರ ಪ್ರಾಣಿಗಳನ್ನು ತಮ್ಮ ವಾಹನವನ್ನಾಗಿ ಬಳಸುವುದರ ಉದ್ದೇಶವೇನು?

ನೋ ಪಾರ್ಕಿಂಗಲ್ಲಿ ನಿಲ್ಲಿಸಿದರೂ ಯಾರೂ ಮುಟ್ಟುವುದಿಲ್ಲವೆಂದು.

ಟಿ.ಆರ್. ರವೀಂದ್ರ, ಬೆಂಗಳೂರು

ಸೌಂದರ್ಯಪ್ರಜ್ಞೆ ಹೆಣ್ಣಿಗೆ ಹೆಚ್ಚಿರುತ್ತದೋ, ಗಂಡಿಗೆ ಹೆಚ್ಚಿರುತ್ತದೋ?

ಹೆಣ್ಣಿಗೇ! ಅವಳ ಸೌಂದರ್ಯ ಆಸ್ವಾದಿಸುವಲ್ಲೇ ಇವನು ಪ್ರಜ್ಞೆ ಕಳೆದುಕೊಂಡಿರುತ್ತಾನೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

ದೇವರನ್ನೇ ಪಣಕ್ಕಿಡುವ ಈ ರಾಜಕಾರಣಿಗಳು ಪಾಂಡವರ ಕುಲದವರೆ?

ಊಹೂ. ಪ್ಯಾಂಡೆಮಿಕ್ ಕುಲದವರು.

ಕೊಟ್ಟೂರು ಜವಳಿ ಜಯ್ಯಣ್ಣ, ದಾವಣಗೆರೆ

ಪದಗ್ರಹಣಕ್ಕೂ, ಪಾಣಿಗ್ರಹಣಕ್ಕೂ ಏನು ವ್ಯತ್ಯಾಸ?

ಪದಗ್ರಹಣ ಕ್ರೆಡಿಟ್ ಅಕೌಂಟ್; ಪಾಣಿಗ್ರಹಣ ಡೆಬಿಟ್ ಅಕೌಂಟ್.

## ಬಹುಮಾನಿತ ಪ್ರಶ್ನೆ

ಫಾಲನೇತ್ರ ಸಜ್ಜನ, ಶಿರಸಿ

ಉತ್ತರದಕ್ಷಿಣ ಕನ್ನಡ ಜಿಲ್ಲೆಗಳಿರುವಂತೆ ಪೂರ್ವಪಶ್ಚಿಮ ಕನ್ನಡ ಜಿಲ್ಲೆಗಳೇಕಿಲ್ಲ?

ಪೂರ್ವ(ಕಾಲ)ದ ಕನ್ನಡನಾಡು ಹರಿದು ಹಂಚಿಹೋದ್ದರಿಂದ ಆ ಆಸೆಯೇ ಪಶ್ಚಿಮವಾಯಿತಂತೆ.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು

ಇಲ್ಲೊಬ್ಬರು ಯಾರೇನೇ ಅಂದರೂ, ಹೀಯಾಳಿಸಿದರೂ ಶಿವಾರ್ಪಿತ ಎಂದುಚ್ಚರಿಸಿ ನಗುತ್ತಾರಲ್ಲಾ...?

ಹಾಲಾಹಲ ಕುಡಿದವ ಅದೇ ಡಯಟ್ ಡ್ರಿಂಕ್ ಎಂದುಕೊಂಡಿರುವರಂತೆ. ಬ್ರ್ಯಾಂಡ್ ಎಫೆಕ್ಟ್!

ತಲಕಾಡು ಶ್ರೀನಿಧಿ, ಬೆಂಗಳೂರು

ಪಕ್ಕದ ಮನೆಯ ಕೂಸು ನನ್ನನ್ನು ಅಜ್ಜ ಎಂದು ಕರೆದು ನನ್ನವಳನ್ನ ಆಂಟಿ ಅಂತಾನಲ್ಲಾ...?

ಅಬ್ಬಬ್ಬ! ಬಲು ಚೂಟಿ; ಹೆಣ್ಣಿನ ಮನ ಒಲಿಸಿಕೊಳ್ಳುವ ಕಲೆ ಈಗಲೇ ತಿಳಿದಿದೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಕಾಲಜ್ಞಾನಕ್ಕೂ, ಲೋಕಜ್ಞಾನಕ್ಕೂ ಏನು ವ್ಯತ್ಯಾಸ?



ಕಾಲಜ್ಞಾನ ಶುದ್ಧ ಕಲ್ಪನೆ; ಲೋಕಜ್ಞಾನ ಸಂಪೂರ್ಣ ವಾಸ್ತವ.

ಶಾಂತ ಗೌಡ, ಬೆಂಗಳೂರು

ನೀವು ತಲೆ ತುರಿಸಿಕೊಳ್ಳುವಂಥ ಪ್ರಶ್ನೆ ಕೇಳಲೆಂದು ಎಷ್ಟೇ ತಲೆ ತುರಿಸಿಕೊಂಡರೂ ಪ್ರಶ್ನೆ ಹೊಳೆಯುತ್ತಿಲ್ಲವಲ್ಲಾ...?

ಚಿಂತೆ ಬೇಡ. ತುರುಚೆ ಗಿಡದ ಎಲೆ ಕಳುಹಿಸಿ ಸಾಕು.

ಎಚ್.ಕೆ. ವಿಜಯಕುಮಾರ್, ರಾಯಚೂರು

ರಾಷ್ಟ್ರೀಯತೆಯ ಬಗ್ಗೆ ಅವಗಾಹನೆ ಮತ್ತು ಸಾಕ್ಷಾತ್ಕಾರ ಯಾವಾಗ ಮೂಡುತ್ತದೆ?

ಕನ್ನಡಿಗ, ತೆಲುಗ, ಗುಜರಾತಿ, ಬಂಗಾಳಿ ಎಲ್ಲರೂ ಅಳಿದು ಕೇವಲ ಭಾರತೀಯ ಮಾತ್ರ ಉಳಿದಾಗ.

■ **ರಾಮ್**